**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.ಯವರ ನ್ಯಾಯಾಲಯ, ಪೊನ್ನಂಪೇಟೆ, ಕೊಡಗು ಜಿಲ್ಲೆ.**

**ಕ್ರಿಮಿನಲ್ ಮೊ.ಸಂ. 73/2016.**

ಪ್ರಾ. ಸಾ. :-3

ಚಾ. ಸಾ. :-2

ಹೆಸರು :- ಗಣೇಶ್
ತಂದೆಯ ಹೆಸರು :- ಚಂದ್ರಯ್ಯ
ವಯಸ್ಸು :- 37 ವರ್ಷ
ಉದ್ಯೋಗ :- ಬಸ್ ಕಂಡಕ್ಟರ್
ವಾಸಸ್ಥಳ :- ಮಗ್ಗುಲ

ಪ್ರಮಾಣೀಕರಿಸಲಾದ ದಿನಾಂಕ :-12-07-2023.

ಮುಖ್ಯ ವಿಚಾರಣೆ :- ಮಾನ್ಯ ಸ. ಸ. ಅ. ರವರಿಂದ :-

ಸಾಕ್ಷಿ ತಮ್ಮ ಸಹಿ ಇರುವ ದಾಖಲೆಗಳನ್ನು ಗುರುತಿಸಿದ್ದು ಸದರಿ ದಾಖಲೆಗಳು ಕೃತ್ಯ ಸ್ಥಳದ ಪಂಚನಾಮೆ ಆಗಿದ್ದು ಅವುಗಳನ್ನು ಈಗಾಗಲೆ ನಿಪಿ 3 ಮತ್ತು 4 ಅಂತ ಗುರುತಿಸಲಾಗಿದ್ದು ಸಾಕ್ಷಿ ಸಹಿಯನ್ನು ನಿಪಿ 3 ಸಿ, 4 ಸಿ ಅಂತ ಗುರುತಿಸಲಾಯಿತು. ಸದರಿ ದಾಖಲೆಗಳಲ್ಲಿ ಏನು ಬರೆದಿರುತ್ತಾರೆ ಅಂತ ಗೊತ್ತಿಲ್ಲ, ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ. ಏನನ್ನು ಅಮಾನತು ಪಡಿಸಿಕೊಂಡಿಲ್ಲ,ಯಾವುದೇವಸ್ತುಗಳನ್ನು ಸ್ಯಾಂಪಲ್ ಗಾಗಿ ಕಾಯ್ದಿರಿಸಿಲ್ಲ. ನಾನು ನನ್ನ ವ್ಯಯಕ್ತಿಕ ಕೆಲಸದ ನಿಮಿತ್ತ ಪೋಲೀಸ್ ಠಾಣೆಗೆ ಹೋದಾಗ ಕೆಲವು ದಾಖಲೆಗಳಿಗೆ ನನ್ನ ಸಹಿ ಪಡೆದಿರುತ್ತಾರೆ , ಅವು ಯಾವ ದಾಖಲೆಗಳು ಅಂತ ಗೊತ್ತಿಲ್ಲ. ಈಗ ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿದರೆ ಗುರುತಿಸಲಾಗುವುದಿಲ್ಲ. ಪೋಲೀಸರ ಮುಂದೆ ನಾನು ಯಾವುದೆ ಹೇಳಿಕೆ ನೀಡಿಲ್ಲ. ಪ್ರಕರಣದ ಬಗ್ಗೆ ನನಗೆ ಯಾವುದೆ ಮಾಹಿತಿ ಇಲ್ಲ.

(ಈ ಹಂತದಲ್ಲಿ ಸ.ಸ.ಅ.ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವಂತೆ ಕೋರಿಕೊಂಡ ಮೇರೆಗೆ ದಾಖಲೆಗಳನ್ನು ಪರಿಶೀಲಿಸಿ ಹಾಗೂ ಸ.ಸ.ಅ.ರವರ ವಾದವನ್ನು ಆಲಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು.)

<u>ಪಾಟೀ ಸವಾಲುಃ- ಮಾನ್ಯ ಸ ಸ ಅ ರವರಿಂದ</u> ಃ-

ದಿನಾಂಕಃ 11.07.2015 ರಂದು ರಾತ್ರಿ 11ಃ30 ಸುಮಾರಿಗೆ ನಾನು ವಿರಾಜಪೇಟೆ ನಗರದಲ್ಲಿದ್ದಾಗ ಪೋಲೀಸರು ಬಂದು ಪಂಚನಾಮೆ ಮಾಡಲು ಸಲುವಾಗಿ ಹಾಜರಾಗಲು ಕೇಳಿಕೊಂಡಂತೆ ನಾನು ಒಪ್ಪಿಕೊಂಡು ನಾನು ಅವರೊಂದಿಗೆ ಹೋಗಿದ್ದೆ ಎಂದರೆ ಸರಿಯಲ್ಲ. ನಂತರ ನಾನು ಪೋಲೀಸ್ ಸಿಬ್ಬಂದಿಯೊಂದಿಗೆ ವಿರಾಜಪೇಟೆ ನಗರದ ಕಾವೇರಿ ಕಾಲೇಜಿನ ಮುಂಬಾಗದಲ್ಲಿ ನಿಂತಿದ್ದ ಬಿಳಿ ಬಣ್ಣದ ಟೆಂಪೊ ಹತ್ತಿರ ಹೋಗಿ ಪೋಲೀಸರು ಸುತ್ತುವರಿದಾಗ ಆರೋಪಿತರು ತಪ್ಪಿಸಿಕೊಳ್ಳಲು ಪ್ರಯತ್ನಿಸಿದರು ಎಂದರೆ ಸರಿಯಲ್ಲ. ನಂತರ ಪೋಲೀಸರು 3 ಜನ ಆರೋಪಿತರನ್ನು ಹಿಡಿದು ವಿಚಾರಿಸಲಾಗಿ ಅವರ ಹೆಸರು ಮತ್ತು ವಿಳಾಸ ತಿಳಿಸಿದರು ಎಂದರೆ ಸರಿಯಲ್ಲ. ನಂತರ ವಾಹನದಲ್ಲಿದ್ದ ಬೀಟೆ ಮರಗಳನ್ನು ಸಾಗಿಸಲು ಪರವಾನಗಿ ಇದೆಯೆ ಎಂದು ಕೇಳಲಾಗಿ ಆರೋಪಿತರು ಯಾವುದೇ ದಾಖಲೆಗಳನ್ನು ತೋರಿಸದೆ ಇದ್ದಾಗ ಆರೋಪಿತರು ಅಕ್ರಮವಾಗಿ 25 ಬೀಟೆ ನಾಟಗಳನ್ನು ಸಾಗಾಟ ಮಾಡುತ್ತಿದ್ದಾರೆ ಎಂದು ಖಚಿತ ಪಡಿಸಿಕೊಂಡು ರಾತ್ರಿ 10ಃ30 ರಿಂದ 12 ಗಂಟೆಯ ವರೆಗೆ ಅಮಾನತ್ತು ಕ್ರಮ ಜರುಗಿಸಿ ನನ್ನ ಸಹಿ ಪಡೆದರು ಎಂದರೆ ಸರಿಯಲ್ಲ.

ದಿನಾಂಕಃ 12.07.2015 ರಂದು ಆರೋಪಿತರು ಮರ ಕಡಿದ ಸ್ಥಳವನ್ನು ತೋರಿಸುತ್ತೇನೆ ಎಂದು ತಿಳಿಸಿದಂತೆ ಪಂಚನಾಮೆ ಮಾಡುವ ಸಲುವಾಗಿ ನನ್ನನ್ನು ಮತ್ತು ಚಾಸಾ 2 ರವರನ್ನು ಕರೆದುಕೊಂಡು ಬೀರುನಾಣಿ-ಟಿ ಶೆಟ್ಟಿಗೇರಿ ಗ್ರಾಮದ ಚೋನಿರಾ ಅಬಿಲಾಷ್ ರವರ ಮನೆಗೆ ಹೋಗುವ ದಾರಿಯಲ್ಲಿರುವ ಕಾಫಿ ತೋಟಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಒಣಗಿ ನಿಂತಿದ್ದ 2 ಬೀಟೆ ಮರಗಳ ಕಡಿದ ಸ್ಥಳವನ್ನು ತೋರಿಸಿದರು ಎಂದರೆ ಸರಿಯಲ್ಲ. ನಂತರ ಸ್ಥಳದಲ್ಲಿ ಮರ ಕಡಿದ ಬಗ್ಗೆ ಮರದ ಚಕ್ಕೆಗಳು ಕಂಡುಬಂದಿತು ಎಂದರೆ ಸರಿಯಲ್ಲ. ಅವುಗಳನ್ನು ಸ್ಯಾಂಪಲಾಗಿ ಅಮಾನತ್ತು ಪಡಿಸಿಕೊಂಡರು ಎಂದರೆ ಸರಿಯಲ್ಲ. ಸದರಿ ಮರಗಳನ್ನು ಕಡಿಯುವ ಸಲುವಾಗಿ ಯಂತ್ರಗಳನ್ನು ಬಳಸಿರುತ್ತಾರೆ ಎಂದು ನಮ್ಮ ಸಮಕ್ಷಮ ಪೋಲೀಸರಿಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಈಗ ಮೇಲೆ ವಿವರಿಸಿದಂತೆ ಪೋಲೀಸರಿಗೆ ತನಿಖೆ ಕಾಲದಲ್ಲಿ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಪೊಲೀಸರ ಮುಂದೆ ನೀಡಿದ್ದ ಹೇಳಿಕೆಯನ್ನು ನಿರಾಕರಿಸಿದ ಮೇರೆಗೆ ಹೇಳಿಕೆಯನ್ನು ನಿಪಿ 7

ಎಂದು ಗುರುತಿಸಲಾಯಿತು. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು :- ಆರೋಪಿತರ ಪರ ವಕೀಲರು ಹಾಜರಿದ್ದು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತ್ತಲೇಖನದಂತೆ ನೇರವಾಗಿ ಗಣಕಯಂತ್ರದಲ್ಲಿ ಬೆರಳಚ್ಚುಕರಿಸಿ ಅಚ್ಚುಪ್ರತಿಯನ್ನು ತೆಗೆಯಲಾಗಿರುತ್ತದೆ)

sd/-

ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.

ಜೆ.ಎಂ.ಎಫ್.ಸಿ. ನ್ಯಾಯಾಧೀಶರು,
ಪೊನ್ನಂಪೇಟೆ.

(ಸಾಕ್ಷಿಯ ಸಹಿ)